## ಕನ್ನಡದ ಹೆಮ್ಮೆಯ ದತ್ತಣ್ಣ



ಝೀ ವಾಹಿನಿಯ 'ವೀಕೆಂಡ್ ವಿತ್ ರಮೇಶ್' ಕಾರ್ಯಕ್ರಮದಲ್ಲಿ ನಟ ದತ್ತಾತ್ರೇಯ ಅವರ ಪರಿಚಯ ಸೊಗಸಾಗಿ ಮೂಡಿಬಂತು. ಅವರು ವಾಯುಸೇನೆಯಲ್ಲಿ ವಿಂಗ್ ಕಮಾಂಡರ್ ಆಗಿದ್ದವರು, ಹಲವು ಕ್ಷೇತ್ರಗಳಲ್ಲಿ ಅವಿಸ್ಮರಣೀಯ ಸೇವೆ ಮಾಡಿದ್ದಾರೆ. ಹವ್ಯಾಸಿ ರಂಗಭೂಮಿಯಲ್ಲಿ ಅವರ ಅನುಭವ ಕುತೂಹಲಕರವಾಗಿತ್ತು. ಸಿನಿಮಾ ರಂಗದ ಸಾಧನೆ ಅದ್ಭುತ. ಸಾಧಾರಣ ಜುಬ್ಬ, ಪೈಜಾಮ ಮತ್ತು ಹೆಗಲಿಗೆ ಚೀಲ ಹಾಕಿಕೊಂಡು ಓಡಾಡುವ ಈ ಸಾಧಾರಣ ವ್ಯಕ್ತಿ ನಮ್ಮ ಹೆಮ್ಮೆಯ ದತ್ತಣ್ಣ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ರಮೇಶ್ ವಿತ್ ಮಂಡ್ಯ ರಮೇಶ್!

ಎಲ್ಲ ರೀತಿಯ ಪಾತ್ರಗಳಿಗೆ ಸೈ ಎನ್ನಿಸಿಕೊಂಡಿರುವ ಮಂಡ್ಯ ರಮೇಶ್ ಅವರೊಂದಿಗಿನ ಕಾರ್ಯಕ್ರಮ ಅದ್ಭುತವಾಗಿತ್ತು. ಅವರ ಸರಳತೆ, ಕಲಾಪ್ರಜ್ಞೆ, ನೀನಾಸಂ ದಿನಚರಿ, ತಿರುಗಾಟ, ರಂಗಾಯಣದ ಕಥೆ, ಕೆ.ವಿ. ಸುಬ್ಬಣ್ಣ ಹಾಗೂ ಬಿ.ವಿ. ಕಾರಂತ್ ಅವರಂತಹ ದಿಗ್ಗಜರ ಜೊತೆ ಕಳೆದ ಆ ದಿನಗಳ ಸ್ಮರಣೆ ಚರಿತ್ರೆ ಪುಟಗಳು ತೆರೆದಂತೆ ಆಯಿತು. ಹಿರಿತೆರೆ ಮತ್ತು ಕಿರುತೆರೆಯಲ್ಲಿ ಪೋಷಕ ಪಾತ್ರಗಳಲ್ಲಿ ಹಲವು ವರ್ಷಗಳ ಕಾಲ ಅಭಿನಯಿಸಿದರೂ ತಮ್ಮನ್ನು ಕಲಾವಿದನನ್ನಾಗಿ ರೂಪಿಸಿದ ರಂಗಭೂಮಿಯ ಬಗ್ಗೆ ಅವರಿಗೆ ಇರುವ ಒಲವು ಮೆಚ್ಚುವಂತಹದ್ದು. ಅವರ ರಂಗ ತಂಡ 'ನಟನ' ಪ್ರಯೋಗ–ಪ್ರಯತ್ನ ಹೊಸ ಪೀಳಿಗೆಗೆ ಮಾದರಿ.

—ನಿಖಿತಾ ಜಿ., ಹೊಸನಗರ

## ಅದ್ಭುತ ಸಂಚಿಕೆಗಳು, ಅದ್ಭುತ ಅತಿಥಿಗಳು

ಡಾ. ಸಿ.ಎನ್. ಮಂಜುನಾಥ್ ಮತ್ತು ದತ್ತಣ್ಣ ಅವರ ಸಂಚಿಕೆಗಳು ಅದ್ಭುತವಾಗಿದ್ದವು. ಆದರೆ ಅವುಗಳನ್ನು ಒಂದೇ ಸಂಚಿಕೆಗೆ ಸೀಮಿತಗೊಳಿಸಿದ್ದು ಸರಿಕಾಣಲಿಲ್ಲ. ಸಾಧಕರ ಬಗ್ಗೆ ಮಾತನಾಡಲು ಆಗಮಿಸುವ ಅತಿಥಿಗಳು ಯಾರು ಎಂದು ಕೆಲವೊಮ್ಮೆ ತಿಳಿಯುವುದಿಲ್ಲ. ಅದನ್ನು ವಾಹಿನಿಯವರು ಸರಿಪಡಿಸಿದರೆ ಕಾರ್ಯಕ್ರಮ ಹೆಚ್ಚು ಅರ್ಥಪೂರ್ಣವಾಗಿರುತ್ತದೆ.

—ವಿಶ್ವೇಶ್ವರ ಮ.

ವಾರದ ಪತ್ರ

## ಅಕ್ಕರೆಯ ಅಪ್ಪುಗೆ

ಕಲರ್ಸ್‌ನ 'ಭಾಗ್ಯಲಕ್ಷ್ಮಿ' ಧಾರಾವಾಹಿಯ ಇತ್ತೀಚಿನ ಒಂದು ಸಂಚಿಕೆಯಲ್ಲಿ ಅತ್ತೆ ತನ್ನ ಸೊಸೆಯನ್ನು ಕರೆದು 'ನನ್ನ ಮಗನ ಜೊತೆಗಿನ ನಿನ್ನ ಸಂಬಂಧ ಹೇಗಿದೆ? ನೀನು ಸಂತೋಷವಾಗಿರುವೆಯಾ' ಎಂದು ಆಪ್ತವಾಗಿ ವಿಚಾರಿಸುತ್ತಾಳೆ. ಆಗ ಸೊಸೆಯಾದವಳು ಸತ್ಯವನ್ನು ಹೇಳಲು ಮನಸ್ಸು ಬಾರದೆ ಸುಳ್ಳನ್ನೇ ಹೇಳುತ್ತಾಳೆ. ನಂತರ ಸೊಸೆಯನ್ನು ಸಮಾಧಾನಿಸುತ್ತಾ ಅತ್ತೆ ಧೈರ್ಯ ತುಂಬುತ್ತಾಳೆ. ಸೊಸೆಯನ್ನು ಪ್ರೀತಿಯಿಂದ ಆಲಂಗಿಸಿದ ಸನ್ನಿವೇಶ ತುಂಬ ಖುಷಿಕೊಟ್ಟಿತು. ಭಾವುಕ ಸೆಲೆಯ ಆ ಬಂಧ ಕಣ್ಣಂಚಿನಲ್ಲಿ ನೀರು ತರಿಸಿತು. ಅತ್ತೆ ಎನ್ನುವ ದರ್ಪ ಆಗಾಗ ತೋರಿಸಿದರೂ ಸೊಸೆಯ ಪರವಾಗಿ ನಿಲ್ಲುವ ಅತ್ತೆಯಾಗಿ ಸದಾ ಮೆಚ್ಚುಗೆಯಾಗುತ್ತಾರೆ.

ಕುಸುಮ ಪಾತ್ರದ ಪದ್ಮಜಾ ರಾವ್ ಅವರ ಅಭಿನಯ ಅದ್ಭುತ. ಭಾಗ್ಯ ಎಷ್ಟೇ ಗೋಗರೆದರೂ ಬ್ಯಾಂಕಿನ ಕಡೆಯವರು ಎಂದು ಹೇಳುವ ಮೋಸಗಾರನ ಫೋನಿಗೆ ತನ್ನ ಪತಿಯ ಬ್ಯಾಂಕ್ ಅಕೌಂಟ್ ನಂಬರ್ ಸೇರಿ ಮಾಹಿತಿ ನೀಡಿ ಮೂರು ಲಕ್ಷ ಹಣ ಕಳೆದುಕೊಳ್ಳುವ ಸನ್ನಿವೇಶ ವೀಕ್ಷಕರಿಗೆ ಜಾಗೃತಿ ಮೂಡಿಸುವಂತೆ ಇತ್ತು.

—ನಾ.ರಾ. ಜ್ಯೋತಿ; ಶ್ರೀಧರ ರಾಯಸಂ, ಬೆಂಗಳೂರು

## ಗ್ರಾಮೀಣ ಪ್ರತಿಭೆ ಪ್ರಗತಿ

ಝೀ ಕನ್ನಡ ವಾಹಿನಿ ತನ್ನ ಸಂಗೀತ ಕಾರ್ಯಕ್ರಮದ ಮೂಲಕ ಸಂಗೀತ ನಗರ, ಪಟ್ಟಣ ಪ್ರದೇಶಗಳಿಗೆ ಸೀಮಿತ ಎನ್ನುವ ಭಾವನೆಯನ್ನು ಕಿತ್ತು ಒಗೆಯುವ ಪ್ರಯತ್ನ ಮಾಡಿದೆ. ಅಪ್ಪಟ ಗ್ರಾಮೀಣ ಪ್ರತಿಭೆ ಪ್ರಗತಿ ಬಡಿಗೇರ ಅವರನ್ನು ಸಂಗೀತ ಲೋಕಕ್ಕೆ ಪರಿಚಯಿಸಿದೆ. ಆ ಹುಡುಗಿಯ ಎಲ್ಲ ಹಾಡುಗಳು ವೀಕ್ಷಕರನ್ನು ತಲೆದೂಗುವಂತೆ ಮಾಡಿವೆ. ಅದರಲ್ಲೂ 'ಸಖಿ ಎಲ್ಲೇ ಮಾಧವನು?' ವೀಕ್ಷಕರನ್ನು ಫಿದಾ ಮಾಡಿದೆ.

'ಸರಿಗಮಪ' ಸ್ಪರ್ಧೆಯಲ್ಲಿ ಗ್ರಾಮೀಣ ಪ್ರತಿಭೆಯೊಂದು ಮೇಲುಗೈ ಸಾಧಿಸಿರುವುದು ಹೆಮ್ಮೆಯ ವಿಚಾರ. ಹೊಸ ಪ್ರತಿಭೆಗಳನ್ನು ಹುಡುಕುವ ಈ ವಾಹಿನಿಯ ಪ್ರಯತ್ನ ಶ್ಲಾಘನೀಯ.

—ರಮಾನಂದ ಶರ್ಮಾ, ನವದೆಹಲಿ

## ಸಮೀಕ್ಷೆಯ ಗುಟ್ಟೇನು?

ಖಾಸಗಿ ಟೀವಿಗಳ ಸಮೀಕ್ಷೆ; ಮತದಾರರ ಆಯ್ಕೆ ಹಾಗಂತೆ ಹೀಗಂತೆ... ಹೆತ್ತ ಮೇಲೆ ಅಲ್ಲವೇ ಮಗು ಹೆಣ್ಣೋ–ಗಂಡು ಎಂದು ಗೊತ್ತಾಗುವುದು. ಇವರಿಗ್ಯಾಕೆ ರಾಜಕೀಯ ಪಕ್ಷಗಳಿಗೇ ಇಲ್ಲದ ಧಾವಂತ. ಅದೂ ಚುನಾವಣಾ ಪೂರ್ವದಲ್ಲೇ.

—ಮಲ್ಲಿಕಾರ್ಜುನ ಸುರಧೇನುಪುರ

## ಸ್ಕೂಟರಿನಂತೆ ಕಥೆಯೂ ಕೆಟ್ಟು ನಿಂತರೆ...

ಝೀ ಕನ್ನಡದ 'ಶ್ರೀರಸ್ತು ಶುಭಮಸ್ತು' ಧಾರಾವಾಹಿಯಲ್ಲಿ ಪಾಕಪ್ರವೀಣ ಮಾಧವನ ಕೆಫೆ ಏನೇ ತೊಂದರೆಗಳು ಬಂದರೂ ಗೆಲುವಿನ ಮಾರ್ಗದಲ್ಲಿ ಸಾಗುತ್ತದೆ. ಆದರೆ ಅವನ ಸ್ಕೂಟರಿನದೇ ಸ್ವಲ್ಪ ಸಮಸ್ಯೆ. ಎಲ್ಲೆಂದರಲ್ಲಿ ಅದು ಕೆಟ್ಟು ನಿಲ್ಲುತ್ತಿದೆ. ಕಥೆಯ ಮುಂದುವರಿಕೆಗಾಗಿಯೇ ಕೆಟ್ಟು ನಿಲ್ಲುವಂತೆ ಮಾಡುತ್ತಿರುವುದು ಸ್ವಲ್ಪ ರೇಜಿಗೆ ಎನಿಸುತ್ತದೆ. ಅಷ್ಟೆಲ್ಲ ಹಣ–ಹೆಸರು ಇರುವ ಮಾಧವ ಒಂದು ಹೊಸ ಗಾಡಿ ಕೊಳ್ಳಬಾರದೇ? ಸ್ಕೂಟರ್ ಕೆಟ್ಟೂ ಕೆಟ್ಟೂ ಕೊನೆಗೆ ಟಿ.ಆರ್.ಪಿ. ಕೆಟ್ಟರೆ?

—ವಾ. ಮುರಳೀಧರ, ತೀರ್ಥಹಳ್ಳಿ

## ಪ್ರಗತಿ ನಿರಂತರವಾಗಿರಲಿ...

ಝೀ ಕನ್ನಡದ 'ಸರಿಗಮಪ ಲಿಟಲ್ ಚಾಂಪ್ಸ್' 19ನೇ ಸಂಚಿಕೆಯಲ್ಲಿ ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಚಾಲುಕ್ಯರ ಬೀಡಾದ ಪಟ್ಟದಕಲ್ಲಿನ ಪ್ರಗತಿ ಬಡಿಗೇರ್ ಅವರ ಗೆಲುವು ಖುಷಿಕೊಟ್ಟಿತು. ಆ ಪುಟಾಣಿ ಇನ್ನೂ ಹೆಚ್ಚಿನ ಎತ್ತರಕ್ಕೆ ಬೆಳೆಯಲಿ. ನಾಲ್ಕು ತಿಂಗಳ ಸಂಗೀತ ಕಾರ್ಯಕ್ರಮ ಪ್ರೇಕ್ಷಕರಿಗೆ ಸಂತೋಷವನ್ನು ತಂದಿತು. ಎರಡನೇ ಸ್ಥಾನ ಪಡೆದ ಶಿವಾನಿ ಒಳ್ಳೆಯ ಹಾಡುಗಳನ್ನು ಹಾಡಿದ್ದಾಳೆ.

—ಬಸಪ್ಪ ಎಸ್. ಮುಳ್ಳೂರ, ಹಲಗತ್ತಿ; ಪೂರ್ಣಿಮಾ ಮೂರ್ತಿ, ಬೆಂಗಳೂರು

## ವಿನಯ-ಒಳ್ಳೆಯತನವೇ ಭೂಷಣ

ಕಲರ್ಸ್ ವಾಹಿನಿಯ 'ಲಕ್ಷ್ಮೀ ಬಾರಮ್ಮ' ಧಾರಾವಾಹಿಯಲ್ಲಿ – ತನಗೆ ಅಂದವಿದೆ, ಹಣವಿದೆ, ಡ್ಯಾನ್ಸ್ ಬರುತ್ತದೆ, ಒಳ್ಳೆಯ ಕೊರಿಯೊಗ್ರಾಫರ್ ಪದವೀಧರೆ, ಆ ಲಕ್ಷ್ಮಿಗೆ ಏನಿದೆ ಎಂದು ಕೀರ್ತಿ ಪ್ರಶ್ನಿಸುತ್ತಾಳೆ. ಪಾಪ, ಆಕೆಗೆ ಮನುಷ್ಯನಿಗೆ ಅತಿಮುಖ್ಯವಾಗಿ ಇರಬೇಕಾದ ತಾಳ್ಮೆ, ವಿನಯ ಮತ್ತು ಒಳ್ಳೆಯತನ ಇಲ್ಲ. ಅದುವೇ ಇಲ್ಲ ಎಂದ ಮೇಲೆ ಬೇರೆ ಏನಿದ್ದರೂ ಪ್ರಯೋಜನ ಇಲ್ಲ.

—ಸಿ.ಆರ್. ಶ್ರೀನಿವಾಸ, ಬೆಂಗಳೂರು